# ಯೂಟ್ಯೂಬ್ ನನ್ನ ಗುರು

ವರ್ಷಾ ಎಚ್.ಕೆ.
ಉದಯದ
'ಕಸ್ತೂರಿ ನಿವಾಸ'ದ
ಮೃದುಲಾ



◆ **'ಕಸ್ತೂರಿ ನಿವಾಸ' ಅಂದ ತಕ್ಷಣ ರಾಜ್‌ಕುಮಾರ, ಆರತಿ– ಜಯಂತಿ ಕಣ್ಮುಂದೆ ಬರುತ್ತಾರೆ. ಮೊದಲು ಆ ಹೆಸರು ಕೇಳಿದಾಗ ನಿಮಗೆ ಏನೆನಿಸಿತು?**

ಸಿನಿಮಾ ಅಷ್ಟು ಗೊತ್ತಿಲ್ಲ. ನನ್ನ ಪಾತ್ರದ ಬಗ್ಗೆ ನನಗೆ ಖುಷಿ ಆಯ್ತು. ಇದು ಎಲ್ಲರ ಮನೆಲ್ಲೂ ಇರಬಹುದಾದ ಒಂದು ವ್ಯಕ್ತಿತ್ವ. ಬಬ್ಲಿ ಹುಡುಗಿಯಾಗಿ ನಾನು ಕಾಣಿಸಿಕೊಳ್ಳಬೇಕಿದೆ. ಸಮಕಾಲೀನ ಸಂದರ್ಭದಲ್ಲಿ ಒಂದೇ ಮನೆಯಲ್ಲಿ ಸಾಂಪ್ರದಾಯಿಕ ಮತ್ತು ಮಾಡರ್ನ್ ಜೀವನ ಶೈಲಿಯವರು ಇರಲು ಸಾಧ್ಯ. ಹಾಗಾಗಿ ನನ್ನ ಪಾತ್ರದ ಗುಣ ಎಲ್ಲರ ಮನೆಯಲ್ಲೂ ಇರಬಹುದು. ಸಿನಿಮಾಕ್ಕೂ ಇದಕ್ಕೂ ಯಾವುದೇ ಸಂಬಂಧ ಇಲ್ಲ. ಹೊಸ ರೀತಿಯ ಕಲ್ಪನೆ.

◆ **ಪಾತ್ರಕ್ಕಾಗಿ ಪಟ್ಟ ಪಯತ್ನ ಹೇಗಿತ್ತು?**

ನಿರಂತರವಾಗಿ ಆಡಿಷನ್‌ಗಳನ್ನು ಕೊಡುತ್ತಾ ಇದ್ದೆ. ಆರನೇ ಪ್ರಯತ್ನದಲ್ಲಿ ಯಶಸ್ಸು ಸಿಕ್ಕಿತು. ಮೊದಲು ಕಲರ್ಸ್ ಸೂಪರ್‌ನ 'ರಾಜಾ ರಾಣಿ'ಯಲ್ಲಿ ಪುಟ್ಟ ಪಾತ್ರ ಅದು ಕೊನೆಯಲ್ಲಿ ನನ್ನ ಪಾಲಿಗೆ ಬಂದ ಪಾತ್ರ. ಅದೂ ನಾಯಕಿಯ ತಂಗಿಯ ಪಾತ್ರ. ನಾಯಕಿಯ ಮದುವೆ ಆದ ಮೇಲೆ ಅದು ಮುಗಿಯುತ್ತದೆ. ತಕ್ಷಣವೇ ನನಗೆ ಕಸ್ತೂರಿಯಲ್ಲಿ 'ನಾಗಮಂಡಲ'ದಲ್ಲಿ ಅವಕಾಶ ಸಿಕ್ಕಿತು. 'ಕಸ್ತೂರಿ ನಿವಾಸ' ನನ್ನ ಮೂರನೇ ಧಾರಾವಾಹಿ.

ಅಭಿನಯ ಮಾಡಿ ನೋಡುವ ಎನ್ನುವ ದೃಷ್ಟಿಯಲ್ಲಿ ಪ್ರಯತ್ನ ಮಾಡಿದೆ. ಇದಕ್ಕಾಗಿ ಯಾವ ತಯಾರಿಯನ್ನೂ ಮಾಡಿಕೊಂಡಿರಲಿಲ್ಲ. ಆಡಿಷನ್‌ಗೆ ಹೋಗುತ್ತಿದ್ದೆ; ಕೇಳಿದ್ದನ್ನು ನನಗೆ ಗೊತ್ತಿದ್ದಂತೆ ಮಾಡಿಬರ್ತಾ ಇದ್ದೆ. ಆರಂಭದಲ್ಲಿ ಪಾತ್ರಕ್ಕೆ ಸೂಕ್ತ ಆಗುವುದಿಲ್ಲ ಎಂದು ನನ್ನ ಪಯತ್ನ ವಿಫಲವಾದವು. ವಿಫಲ ಯತ್ನಗಳು ನನ್ನಲ್ಲಿ ತುಂಬ ಗಂಭೀರವಾದ ಕನಸು ಹುಟ್ಟಲು ಕಾರಣವಾಯಿತು. ಆಗಲೇ ನಾನು ನಟಿ ಆಗಲೇಬೇಕು ಎನ್ನುವ ಹಟವನ್ನು ಹೊತ್ತೆ. ಅದಕ್ಕಾಗಿ ನಿತ್ಯವೂ ಸ್ವಯಂ ಅಭ್ಯಾಸವನ್ನು ಮಾಡುತ್ತಿದ್ದೆ. ನಮ್ಮ ಸುತ್ತಲಿನ ಜನರನ್ನೇ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಒಬ್ಬಳೇ ಇದ್ದಾಗ ಸಂದರ್ಭಕ್ಕೆ ಒಂದೊಂದು ಪಾತ್ರಗಳು ಹೇಗೆ ಪ್ರತಿಕ್ರಿಯೆ ನೀಡಬಹುದು ಎನ್ನುವುದನ್ನು ಅಭ್ಯಾಸ ಮಾಡಿದೆ. ಜೊತೆಗೆ ಆಡಿಷನ್‌ಗಳಲ್ಲಿ ಏನಾದರೂ ಹೊಸದನ್ನು ಕಲಿತಾ ಇದ್ದೆ. ಅದನ್ನು ಆಗಾಗ ಅವಲೋಕನ ಮಾಡಿಕೊಳ್ಳುತ್ತಿದ್ದೆ.

◆ **ಬಣ್ಣದ ಲೋಕದ ಆಸೆ ಹುಟ್ಟಿದ್ದು ಹೇಗೆ?**

ಪಿಯು ಓದುವಾಗ ಸ್ನೇಹಿತರು ನಿನಗೆ ಒಳ್ಳೆಯ ಲುಕ್ ಇದೆ. ನೀನು ನಟನೆ ಮಾಡಬಹುದು ಎಂದು ಹುರಿದುಂಬಿಸುತ್ತಿದ್ದರು. ನನ್ನ ಸ್ನೇಹಿತರೆ ನನ್ನ ಕೌಶಲ್ಯವನ್ನು ಗುರುತಿಸಿ ನಟನೆಯತ್ತ ಕಣ್ಣು ಹಾಯಿಸುವಂತೆ ಮಾಡಿದರು. ಅದರಿಂದ ಆಸಕ್ತಿ ಬಂತು. ಸಾಮಾಜಿಕ ಮಾಧ್ಯಮಗಳಲ್ಲಿ ಒಂದಾದ ಇನ್‌ಸ್ಟಾಗ್ರಾಂನಲ್ಲಿ 'ಅಪ್‌ಡೇಟ್ ಆಫ್ ಕನ್ನಡ ಚಾನೆಲ್ಸ್' ಮತ್ತು 'ಕನ್ನಡ ಟೀವಿ ಅಪ್‌ಡೇಟ್ಸ್' ಪೇಜ್‌ಗಳಲ್ಲಿ ಪೋಸ್ಟ್‌ಗಳು ಬರುತ್ತಿದ್ದವು. ಕಲಾವಿದರ ಬೇಡಿಕೆ, ಆಡಿಷನ್ ವಿವರಗಳೂ ಬರುತ್ತಿದ್ದವು. ಅವುಗಳನ್ನು ನೋಡಿ ನಾನು ಆಡಿಷನ್ ಕೊಡ್ತಾ ಇದ್ದೆ. ಆರಂಭದಲ್ಲಿ ಪಾತ್ರ ಅಂದರೆ ಏನು? ಚಿತ್ರೀಕರಣ ಹೇಗೆ ಮಾಡುತ್ತಾರೆ ಎನ್ನುವ ತಿಳುವಳಿಕೆ ಕೂಡ ಇರಲಿಲ್ಲ. ಪಾತ್ರ ಪ್ರವೇಶದ ನಂತರ ನಾನು ನಟನೆಯನ್ನು ಕಲಿಯಲು ಶುರುಮಾಡಿದೆ. ಯೂಟ್ಯೂಬ್ ಚಾನೆಲ್, ಸೀರಿಯಲ್, ಸಿನಿಮಾಗಳೇ ನನ್ನ ಅಭಿನಯ ಮಾರ್ಗದರ್ಶಿಗಳು.

◆ **ನಟಿ ಆದ ನಂತರ ನಿಮ್ಮ ಸಾಮಾಜಿಕ ಬದುಕಿನಲ್ಲಿ ಆದ ಬದಲಾವಣೆ ಏನು?**

ಸ್ನೇಹಿತರಾಗಿರಬಹುದು ಬಂಧುಗಳೇ ಆಗಿರಬಹುದು, ಈಗ ನನ್ನನ್ನು ನೋಡುವ ದೃಷ್ಟಿ ಭಿನ್ನ ಆಗಿದೆ ಎನ್ನುವುದಂತೂ ಸತ್ಯ. ಎಲ್ಲಾದರೂ ಭೇಟಿಯಾದರೆ ಅವರೇ ಬಂದು ಮಾತನಾಡಿಸುತ್ತಾರೆ. ಅದನ್ನು ಕಂಡ ನನ್ನ ಪೋಷಕರೂ ಹೆಮ್ಮೆಪಡುತ್ತಾರೆ. ನನ್ನ ನಟನೆಯ ಬಗ್ಗೆ ವಿಮರ್ಶೆ ಮಾಡುತ್ತಾರೆ. ನನ್ನ ಸ್ನೇಹಿತರು ಮಾತ್ರ ಮೊದಲಿನಂತೆ ಇದ್ದಾರೆ. ಆದರೆ ಅವರು ಅವರ ಸ್ನೇಹಿತರು, ಸಂಬಂಧಿಗಳ ಹತ್ತಿರ ನನ್ನ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

◆ **ಎಂತಹ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಇಷ್ಟಪಡ್ತೀರಾ?**

ಕಲಾವಿದೆಯಾಗಿ ಎಲ್ಲಾ ಪಾತ್ರಗಳನ್ನು ಅನುಭವಿಸಬೇಕು ಎನ್ನುವ ಬಯಕೆ ಇದೆ. ಯಾವುದೇ ಪಾತ್ರ ಕೊಟ್ಟರೂ ಅದು ಬಯಸುವಂತೆ ನಾನು ನನ್ನ ಪ್ರತಿಭೆಯನ್ನು ಹೊರಹೊಮ್ಮಿಸಬೇಕು. ಈಗ ನಿರ್ವಹಿಸಿದ ಮೂರು ಧಾರಾವಾಹಿಗಳಲ್ಲೂ ಭಿನ್ನ ಪಾತ್ರಗಳನ್ನು ಮಾಡಿದ್ದೇನೆ. ಮುಂದೆ ಕೂಡ ಭಿನ್ನ ಭಿನ್ನ ಗುಣಧರ್ಮಗಳನ್ನು ಪ್ರತಿನಿಧಿಸಬೇಕು.

◆ **ಅಭಿನಯ ನಿಮ್ಮ ಓದಿಗೆ ಅಡ್ಡಿಯಾಯಿತು ಎಂದು ಅನ್ನಿಸಿದೆಯಾ?**

ಶೈಕ್ಷಣಿಕವಾಗಿ ಮಹತ್ತರವಾದ ಕನಸುಗಳನ್ನೇನೂ ಹೊತ್ತಿರಲಿಲ್ಲ. ಪಿಯು ಮುಗಿದ ನಂತರ ಇಂಟೀರಿಯರ್ ಡಿಸೈನರ್ ಕೋರ್ಸ್‌ಗೆ ಸೇರಿದೆ. ಅದನ್ನು ಮುಂದುವರಿಸುತ್ತಿದ್ದೇನೆ. ಇದರ ಜೊತೆ ಅಭಿನಯವನ್ನು ಮಾಡುತ್ತಿದ್ದೇನೆ. ಜೀವನ ಹೇಗೆ ಬರುತ್ತದೆಯೋ ಹಾಗೆ ಸ್ವೀಕರಿಸುತ್ತಿದ್ದೇನೆ.

■ **ರಾಘವೇಂದ್ರ ಕೆ.**